‘ಜೀವಪ್ರೀತಿ’ ಎಂಬ ಕವನ ಸಂಕಲನದೊಂದಿಗೆ ಕನ್ನಡ ಸಾಹಿತ್ಯ ಲೋಕಕ್ಕೆ ಅಡಿಯಿಟ್ಟಿರುವ ಶ್ರೀಧರ ಪತ್ತಾರ ಅವರು ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಖೇಡಗಿ ಎಂಬ ಊರಿನವರು. ‘ಕಾಟಿಹಳ್ಳದ ತಿರುವು’ ಅವರು ಬರೆದ ಅನುಭವ ಕಥನ. ಕುವೆಂಪು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಓದಿದ ಶ್ರೀಧರ್ ಬೆಳಗಾವಿಯ ಹಿರೇಮಸಳಿಯಲ್ಲಿ ಬೀಟ್ ಫಾರೆಸ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಾಲ ಗಟ್ಟಿಯಾಗಿರುತ್ತದೆ. ಒಳಗಿನ ಬೇಗೆಯನು ಯಾರೇನು ಬಲ್ಲರು ನೋವು ತಿಂದವನು ಬಾಯಿಬಿಚ್ಚಿ ಹೇಳೋವರೆಗೂ ಅನ್ನುತ್ತ ಆಗಂತುಕನ ಮುಖ ದಿಟ್ಟಿಸುತ್ತ, ‘ಸರಿ ಅವರ ಹೆಸರಾದರೂ ಏನು?’ ಕೊನೇರಿ ಕುತೂಹಲದಿಂದ ಮತ್ತೊಂದು ಪ್ರಶ್ನೆ ಹಾಕಿದ. ‘ಅವರು ಹೇಗಿರುವರೆಂದು ಯಾರೋ ಹೇಳಿದ ನೆನಪು, ಬಿಳಿ ನೆಹರು ಶರ್ಟು ಕೆಳಗಡೆ ಅದೇ ಬಣ್ಣದ ಪಂಚೆ, ತಲೆಯ ಮೇಲೊಂದು ಯಾವಾಗಲೂ ಪೇಟ ಇರುತ್ತದೆ. ಬಿಳಿಗಡ್ಡಧಾರಿಯಾದ ಅವರು ಥೇಟ್ ಸ್ವಾಮೀಜಿಗಳಂತೆ ಭಾಸವಾಗುತ್ತಾರಾದರೂ ಖಂಡಿತ ಸ್ವಾಮೀಜಿಗಳಲ್ಲ. ಮಾತು ಅಷ್ಟಕಷ್ಟೇ ಒಂದು ರೀತಿ ಮೌನಿ. ಅದೇ ಹೇಳಿದೆನಲ್ಲ ಆ ಕರಡಿಬೆಟ್ಟದ ದಾರಿಯ ಒಂದು ತಿರುವಿನಲ್ಲಿ ಒಂಟಿ ಗುಡಿಸಲಿದೆಯಂತೆ. ಅದೇ ಅವರ ಬಿಡಾರ’ ಆಗಂತುಕನ ಧ್ವನಿಯಲ್ಲಿ ಸ್ಪಷ್ಟತೆಯಿತ್ತು. ಕೊನೇರಿಗೆ ಈಗ ಎಲ್ಲವೂ ಮನದಟ್ಟಾಯ್ತು. ‘ಆಗಾಗ ಯಾರಾರೋ ಆ ವ್ಯಕ್ತಿಯನ್ನು ಹುಡುಕಿಕೊಂಡು ಬರುತ್ತಿದ್ದ ನೆನಪು, ಅದುವರೆಗೂ ಅಸ್ಪಷ್ಟವಾಗಿದ್ದುದು ಈಗ ಪೂರ್ಣ ಜಪ್ತಿಗೆ ಬಂತು. ಈಗ ಬಂದವನೂ ಆ ವ್ಯಕ್ತಿಯ ಸಲುವಾಗಿಯೇ. ಹೀಗೆ ಬಂದವರಲ್ಲಿ ಇವ ಬಹುಶಃ ಇಪ್ಪತ್ತೊಂದನೇಯವನಿರಬಹುದು. ಆದರೆ ಇವನು ಈಗೇಕೆ ಬಂದಿದ್ದಾನೆ ಇಂತಹ ಅವೇಳೆಯಲ್ಲಿ ಎಂದು ಕೊನೇರಿ ಮನಸ್ಸಿನಲ್ಲೇ ಲೆಕ್ಕಾಚಾರ ಹಾಕತೊಡಗಿದ. ಇವನನ್ನೇ ದಿಟ್ಟಿಸುತ್ತಿದ್ದ ಆಗಂತುಕನ ಕಣ್ಣಲ್ಲಿ ಈ ಬಗ್ಗೆ ಎಳ್ಳಷ್ಟಾದರೂ ಮಾಹಿತಿ ದೊರೆಯಬಹುದೆಂಬ ಆಶಾವಾದ ಕಾಣಿಸುತ್ತಿತ್ತು ಕೊನೇರಿ ತನ್ನ ಕತ್ತನ್ನು ಅಡ್ಡಡ್ಡ ಅಲ್ಲಾಡಿಸುವವರೆಗೂ.

‘ಅವರು ಅಮಾವಾಸ್ಯೆ ಹುಣ್ಣಿಮೆಗೊಮ್ಮೆ ಇದೇ ಮಾರ್ಗವಾಗಿ ನಗರದೊಳಕ್ಕೆ ಬಂದು ಹೋಗುತ್ತಾರಂತೆ. ನಿಮ್ಮ ಕಣ್ಣಿಗೂ ಬಿದ್ದಿರಲೂಬಹುದು?’ ಆಗಂತುಕ ಮತ್ತೆ ಚೂರು ಉತ್ಸಾಹದಿಂದಲೇ ಕೇಳಿದ.

‘ಮೂರ್ನಾಲ್ಕು ವರುಷಗಳಿಂದ ನಾನಿಲ್ಲಿದ್ದೇನೆ. ರಾತ್ರಿಯೆಲ್ಲ ನಿಶಾಚರಿಯಂತೆ ಎಚ್ಚರವಾಗಿರುತ್ತೇನೆ. ನೀವು ಹೇಳಿದ ವ್ಯಕ್ತಿ ಎಂದೂ ನನ್ನ ಕಣ್ಣಿಗೆ ಬಿದ್ದಿಲ್ಲವಲ್ಲ’ ಕೊನೇರಿ ಹೇಳುತ್ತಲೇ ಆಗಂತುಕನ ಮುಖದ ಮೇಲೆ ನಿರಾಶೆಯ ನೆರಳು ಇಣುಕಿತು. ಮತ್ತೆ ಯಾರನ್ನಾದರೂ ಕೇಳಿದರಾಯ್ತೆಂದು ಗುಣಗುಣಿಸುತ್ತ ಕೊನೇರಿ ಬೆರಳು ಮಾಡಿ ತೋರಿಸಿದ ದಾರಿಹಿಡಿದು ಬೆಟ್ಟದ ತುದಿಯನ್ನೇ ದಿಟ್ಟಿಸುತ್ತ ನಡೆದ ಮಂತ್ರಮುಗ್ಧನಂತೆ.

ಮಾತಿನ ಮಧ್ಯೆ ತಾನೂ ಬಹಳ ಜನರಿಂದ ಆ ಮಹಾನುಭಾವರ ಬಗ್ಗೆ ಕೇಳಿದ್ದೇನೆ. ನಾನೂ ನನ್ನ ಮನದ ದುಗುಡವನ್ನು ಅವರೆದುರಿಗೆ ಅರುಹಿ ಹಗುರಾಗಬೇಕೆಂದಿದ್ದೇನೆ. ಮರೀಚಿಕೆಯಾದ ಸುಖ ಸಂತೋಷ, ನೆಮ್ಮದಿಗಾಗಿ ಪರದಾಡುತ್ತಿದ್ದೇನೆ. ಈ ಮುಂಚೆ ಪ್ರಯತ್ನಿಸಿದರೂ ಅವರನ್ನು ಭೇಟಿಯಾಗುವ ಸುಯೋಗ ತನಗೆ ಒದಗಿಬಂದಿಲ್ಲ ಎಂದು ಆಗಂತುಕನಿಗೆ ಹೇಳಬೇಕೆಂದು ನಾಲಿಗೆ ತುದಿವರೆಗೂ ಬಂದಿದ್ದರೂ ಅದನ್ನು ಕಚ್ಚಿಕೊಂಡು ಬೇರೇನೋ ಮಾತನಾಡಿದ್ದ ಕೊನೇರಿ.

ಆಗಂತುಕ ಅಲ್ಲಿಂದ ಹೋದ ಮೇಲೆ ನಾನೂ ಮಹಾನುಭಾವರನ್ನೇ ಧ್ಯಾನಿಸುತ್ತಿರುವೆ. ನನ್ನೀ ಕೆಲಸಕ್ಕೆ ಬೆಂಕಿ ಬಿತ್ತು. ಇದನ್ನು ಬಿಟ್ಟು ಈಗಲೇ ತನ್ನೊಂದಿಗೆ ಬರುವೆನೆಂದಿದ್ದರೆ ಕರೆದುಕೊಂಡು ಹೋಗುತ್ತಿದ್ದನೇನೋ... ಒಪ್ಪದಿದ್ದರೂ ಸರಿ ಅವನ ಕಣ್ಣಿಗೆ ಬೀಳದಂತೆ ಅವಿತುಕೊಂಡಾದರೂ ಬೆನ್ನಟ್ಟಿದರೆ ಸಾಕಿತ್ತು ನಾನು, ಬೆಟ್ಟದಂಚನ್ನು ದಾಟಿ ಆ ಮಹಾನುಭಾವರನ್ನು ಕಾಣಬಹುದಿತ್ತು. ಈ ನಡುರಾತ್ರಿ ಕತ್ತಲನ್ನು ಭೇದಿಸಿಕೊಂಡು ಹೋಗಿ ಬೆಳಕರಿಸಿ ಸಾಹಸಿಯಾಗುತ್ತಿದ್ದೆ. ಅಲ್ಲಿರುವ ಬೆಳಕಿನ ಮಡಿಲಿಂದ ಒಂದಷ್ಟು ನೆಮ್ಮದಿಯನ್ನು ಮೂಟೆಕಟ್ಟಿಕೊಂಡು ಬಂದಿದ್ದರೆ ಬದುಕಿನ ಅಂತ್ಯದವರೆಗೂ ದುಃಖ